ಲಕ್ಷಗಳಲ್ಲಿ ರಾಜ್ಯ ಹೆದ್ದಾರಿ ನವೀಕರಣ ಅಡಿಯಲ್ಲಿ ಕಾಮಗಾರಿ ಪ್ರಗತಿಯಲ್ಲಿದೆ.

2. ಚೈ. 35.00 ಕಿ.ಮೀ. ನಿಂದ ಚೈ. 40.00 ಕಿ.ಮೀ ವರೆಗೆ ಗುಂಡಿಮುಚ್ಚುವ ಕಾಮಗಾರಿಯು ಪೂರ್ಣಗೊಂಡಿರುತ್ತದೆ.

3. ಚೈ. 03.00 ಕಿ.ಮೀ. ನಿಂದ ಚೈ. 18.00 ಕಿ.ಮೀ. ವರೆಗಿನ ರಸ್ತೆಯಲ್ಲಿ 4 ಕಿ.ಮೀ. ರಸ್ತೆಯ ಆಯ್ದ ಭಾಗಗಳಲ್ಲಿ ಬಲಪಡಿಸುವಿಕೆ ಕಾಮಗಾರಿಗೆ 2011–12ನೇ ಸಾಲಿನಲ್ಲಿ ರೂ. 90.00 ಲಕ್ಷಗಳ ಅನುದಾನವು ಬಿಡುಗಡೆಯಾಗಿದ್ದು, ಕಾಮಗಾರಿಯು ಪ್ರಗತಿಯಲ್ಲಿದೆ.

4. ಇನ್ನುಳಿದ 26 ಕಿ.ಮೀ. ರಸ್ತೆಯನ್ನು ತಾತ್ಕಾಲಿಕ ದುರಸ್ಥಿಗಾಗಿ ರೂ. 320.00 ಲಕ್ಷಗಳ ಅಂದಾಜು ಪಟ್ಟಿಯನ್ನು ತಯಾರಿಸಿ ಅನುಮೋದನೆ ನೀಡುವ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಪೌರಾಡಳಿತ ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳು

290 (623) ಶ್ರೀ ರಹೀಂ ಖಾನ್ (ಬೀದರ್):– ಪೌರಾಡಳಿತ, ಸ್ಥಳೀಯ ಸಂಸ್ಥೆಗಳ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಬೀದರ್ ಜಿಲ್ಲೆಯ ಬೀದರ್ ನಗರದಲ್ಲಿ ಯಾವ ಯಾವ ರಸ್ತೆ ಅಗಲೀಕರಣವಾಗಿವೆ ; ಇನ್ನು ಎಷ್ಟು ರಸ್ತೆಗಳು ಅಗಲೀಕರಣ ಮಾಡಲಾಗುವುದು ; ಅವು ಯಾವುವು (ಮಾಹಿತಿ ನೀಡುವುದು) ;

ಆ) ಈ ರಸ್ತೆ ಅಗಲೀಕರಣದಲ್ಲಿ ಸುಮಾರು ಹತ್ತು ಸಾವಿರ ಕುಟುಂಬಗಳು ಮನೆ ಮತ್ತು ಅಂಗಡಿ ಕಳೆದುಕೊಂಡು ನಿರಾಶ್ರಿತರಾಗಿದ್ದಾರೆ. ಈ ಬಡ ಕುಟುಂಬಗಳಿಗೆ ಪರಿಹಾರ ನೀಡಲು ಸರ್ಕಾರದಿಂದ ಯಾವ ಕ್ರಮ ಕೈಗೊಳ್ಳಲಾಗಿದೆ (ಮಾಹಿತಿ ನೀಡುವುದು)

ಇ) ಅವರಿಗೆ ಯಾವಾಗ ಹಾಗೂ ಎಷ್ಟು ಪರಿಹಾರ ಒದಗಿಸಲಾಗುವುದು (ಮಾಹಿತಿ ನೀಡುವುದು) ?

ಶ್ರೀ ಬಾಲಚಂದ್ರ ಲಕ್ಷಣರಾವ್ ಜಾರಕಿಹೋಳಿ (ಪೌರಾಡಳಿತ, ಸ್ಥಳೀಯ ಸಂಸ್ಥೆಗಳ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು):–

ಅ) ಬೀದರ್ ಜಿಲ್ಲೆಯ ಬೀದರ್ ನಗರದಲ್ಲಿ ಕೆಲವು ರಸ್ತೆಗಳಲ್ಲಿಯ ಅತಿಕ್ರಮಗಳನ್ನು ಮಾತ್ರ ತೆರವುಗೊಳಿಸಲಾಗಿದೆ. ಇದು ಅಗಲೀಕರಣದ ಯೋಜನೆ ಆಗಿರುವುದಿಲ್ಲ. ಈವರೆಗೆ ಯಾವುದೇ ರಸ್ತೆಗಳನ್ನು ಅಗಲೀಕರಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಆ) ಅತಿಕ್ರಮಣಗೊಳಿಸಲಾದ ರಸ್ತೆಗಳನ್ನು ಮಾತ್ರ ತೆರವುಗೊಳಿಸಲಾಗಿದೆ. ಅತಿಕ್ರಮಣ ತೆರವಿನಿಂದ ಸಂಪೂರ್ಣವಾಗಿ ಆಸ್ತಿಯನ್ನು ಕಳೆದುಕೊಂಡ ಜನರಿಗೆ ಮಾನವೀಯತೆ ದೃಷ್ಟಿಯಿಂದ ಈ ಕೆಳಗಿನಂತೆ ಪುನರ್ ವಸತಿ ಕಲ್ಪಿಸಲಾಗಿದೆ.

ಅ) **ಮನೆಗಳು :**

1 ಆಶ್ರಯ ಯೋಜನೆಯಡಿಯಲ್ಲಿ ಜಮೀನ್ಸ್ತಾನಪುರದಲ್ಲಿ 65 ಜನರಿಗೆ ವಸತಿ ಸೌಕರ್ಯ

2 ಟಿ.ಡಿ.ಬಿ. ಕಾಲೋನಿಯಲ್ಲಿ 24 ಜನರಿಗೆ ವಸತಿ ಸೌಕರ್ಯ

3 ಟಿ.ಡಿ.ಬಿ. ಕಾಲೋನಿಯಲ್ಲಿ 8 ಜನರಿಗೆ ನಿವೇಶನ ಸೌಕರ್ಯ

4 ಚಿದ್ರಿಯಲ್ಲಿ 5 ಜನರಿಗೆ ವಸತಿ ಸೌಕರ್ಯ

5 ಚಿಕಪೇಟೆ ಗ್ರಾಮದಲ್ಲಿ 5 ಜನರಿಗೆ ವಸತಿ ಸೌಕರ್ಯ

ಆ) **ಅಂಗಡಿಗಳು :**

1 ಸಿ.ಎಂ.ಸಿ. ವಾಣಿಜ್ಯ ಮಳಿಗೆಯಲ್ಲಿ 16 ಜನರಿಗೆ ಅಂಗಡಿಗಳು

2 ಚೌಬಾರ ರಸ್ತೆಯಲ್ಲಿರುವ ಸಿ.ಎಂ.ಸಿ. ವಾಣಿಜ್ಯ ಮಳಿಗೆಯಲ್ಲಿ 32 ಜನರಿಗೆ ಅಂಗಡಿಗಳು

3 ಸಿ.ಎಂ.ಸಿ ಕೇಂದ್ರ ವಾಣಿಜ್ಯ ಮಳಿಗೆಯಲ್ಲಿ 13 ಜನರಿಗೆ ಅಂಗಡಿಗಳು

4 ಸಿ.ಎಂ.ಸಿ. ಕೇಂದ್ರ ಐ.ಡಿ.ಎಸ್.ಎಂ.ಟಿ. ವಾಣಿಜ್ಯ ಮಳಿಗೆಗಳಲ್ಲಿ 40 ಜನರಿಗೆ ಜನರಿಗೆ ಅಂಗಡಿಗಳು.

5 ನೌಬಾದಿನ ಬುಡಾ ಕಛೇರಿಯ ಎದುರುಗಡೆ ಇರುವ ಸಿ.ಎಂ.ಸಿ. ಕಾಂಪ್ಲೆಕ್ಸ್ 9 ಜನರಿಗೆ ಅಂಗಡಿಗಳು.

6 ಕೆ.ಐ.ಎ.ಡಿ.ಬಿ. ಆಟೋ ನಗರದಲ್ಲಿ 100 ಜನರಿಗೆ ಅಂಗಡಿಗಳು.

ಇ) ಉದ್ಭವಿಸುವುದಿಲ್ಲ.